ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ 19-11-2001ರಲ್ಲಿ ಈ ಡಿಪ್ಪಿಲರಿಯನ್ನು ಮುಚ್ಚಲು ಆದೇಶಿಸಿತ್ತು. ಆದರೆ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ಆದೇಶವನ್ನು ತಡೆಹಿಡಿದಿದೆ.

ಪುತ್ತೂರು ಡಿಪೋದಿಂದ ಗ್ರಾಮಾಂತರ ಪ್ರದೇಶಗಳಿಗೆ ಬಸ್‌ಗಳನ್ನು ಓಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 889(1063)

ಸದಸ್ಯರ ಹೆಸರು: ಶ್ರೀ ಅಂಗಾರ ಎಸ್(ಸೂಳ್ಯ)

ಪ್ರಶ್ನೆ

ಅ) ಪುತ್ತೂರು ಡಿಪೋದಿಂದ ಈಗ ಹಾಲಿ ಎಷ್ಟು ಬಸ್‌ಗಳನ್ನು ಓಡಿಸಲಾಗುತ್ತಿದೆ. ಇನ್ನೂ ಎಷ್ಟು ಬಸ್‌ಗಳನ್ನು ಓಡಿಸಬಹುದು? (ವಿವರ ನೀಡುವುದು)

ಆ) ಈ ಡಿಪೋದಿಂದ ಗ್ರಾಮಾಂತರ ಪ್ರದೇಶಕ್ಕೆ ಬಸ್ ಓಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಗ್ರಾಮಾಂತರ ಪ್ರದೇಶದ ಪ್ರಯಾಣಿಕರಿಗೆ ಓಡಾಡಲು ತೊಂದರೆಯಾಗಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಉತ್ತರ

ಅ) ಪ್ರಸ್ತುತ ಪ್ರತಿನಿತ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ಘಟಕವು 108 ಅನುಸೂಚಿಗಳನ್ನು ಆಚರಣೆ ಮಾಡುತ್ತಿದೆ. ಸಂಸ್ಥೆಯು ವ್ಯಾವಹಾರಿಕ ಯೋಜನೆಯಂತೆ ಮಾರ್ಚ್ 2002 ಅಂತ್ಯದೊಳಗೆ ಪುತ್ತೂರು ಘಟಕದಿಂದ 4 ಹೊಸ ಅನುಸೂಚಿಗಳನ್ನು ಪ್ರಾರಂಭಿಸುವ ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ಘಟಕವು ಪ್ರತಿದಿನವು 658 ಸುತ್ತುವಳಿಗಳನ್ನು 108 ಅನುಸೂಚಿಗಳನ್ನು 34841 ಕಿ.ಮೀ.ಗಳನ್ನು ಕ್ರಮಿಸುವಂತೆ ಆಚರಣೆ ಮಾಡುತ್ತಿರುತ್ತದೆ. ಅವುಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ 199 ಸುತ್ತುವಳಿಗಳಲ್ಲಿ 56 ಅನುಸೂಚಿಗಳಲ್ಲಿ 15019 ಕಿ.ಮೀ.ಗಳನ್ನು ಆಚರಣೆ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪುತ್ತೂರು ತಾಲ್ಲೂಕಿನ 70 ಹಳ್ಳಿಗಳ ಪೈಕಿ 67 ಹಳ್ಳಿಗಳಿಗೆ ಮತ್ತು ಸೂಳ್ಯ ತಾಲ್ಲೂಕಿನ 42 ಹಳ್ಳಿಗಳ ಪೈಕಿ 40 ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಅಗತ್ಯತೆಗನುಗುಣವಾಗಿ

ಕಲ್ಪಿಸಲಾಗಿದೆ. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಖಾಸಗೀ ಪ್ರವರ್ತಕರು ಕೆಲವೊಂದು ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿರುತ್ತಾರೆ. ಅವಶ್ಯಕತೆಗೆ ಅನುಗುಣವಾಗಿ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಸಾರಿಗೆಗಳನ್ನು ಒದಗಿಸಲಾಗುವುದು.

ಮಂಡ್ಯ ನಗರಕ್ಕೆ ಕಾವೇರಿ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ.

ಬುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 890(281)

ಸದಸ್ಯರ ಹೆಸರು: ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ)

ಪ್ರಶ್ನೆ

1 ಮಂಡ್ಯ ನಗರಕ್ಕೆ ಕಾವೇರಿ 2ನೇ ಹಂತದ ಕುಡಿಯುವ ನೀರಿನ ಯೋಜನೆಯ ಸೌಲಭ್ಯವನ್ನು ಒದಗಿಸಿಕೊಡಲಾಗಿದೆಯೇ?

2. ಈ ಯೋಜನೆಯ ಕಾಮಗಾರಿ ಅಪೂರ್ಣವಾಗಿರುವುದನ್ನು ಸರ್ಕಾರವು ಮನಗಂಡಿದೆಯೇ?

3. ಹಾಗಿದ್ದಲ್ಲಿ ಬಾಕಿ ಇರುವ ಕಾಮಗಾರಿಗಳು ಯಾವಾಗ ಅನುಷ್ಠಾನಗೊಳಿಸಲಾಗುವುದು?

4. ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ವಿತರಣಾ ಜಾಲವನ್ನು ರೀ ಮಾಡಲಿಂಗ್ ಮಾಡಲು ಮತ್ತು ಅಭಿವೃದ್ಧಿಗೊಳಿಸಲು ಸರ್ಕಾರ ಕಾರ್ಯಕ್ರಮವನ್ನೇನಾದರೂ ರೂಪಿಸಿದೆಯೆ?

4. ರೂಪಿಸಿದ್ದಲ್ಲಿ ಆದರ ವಿವರಗಳೇನು?

ಉತ್ತರಿಸುವ ಸಚಿವರು: ಶ್ರೀ ಎಸ್. ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

1. ಒದಗಿಸಲಾಗಿದೆ.

2. ಈ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು ನಗರಸಭೆಯವರು ನಿಷೇಶನವನ್ನು ಹಸ್ತಾಂತರಿಸಲು ತಡವಾಗಿರುವುದರಿಂದ ಜಲಸಂಗ್ರಹಾಗಾರದ ಕೆಲಸ ಇನ್ನೂ ಪ್ರಾರಂಭಿಸಿರುವುದಿಲ್ಲ.